122

1095

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯುಷ್ ಪತ್ರ. [ನಂ. 27.

ಬೆಂಗಳೂರು, ಗುರುವಾರ, ಜುಲೈ ತಾಃ 7, ಸನ್ 1904.

IIನ ಭಾಗ.

ಇಂಡ್ಯೂಸವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ಗಳು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್ ತಾರೀಖು ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, 1904—05ನೆ ಇಸವಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ್ ಫಾರೆಸ್ಟುಗಳ ಪಸಾರೇ ಜೆಣಚಿಯ ಹಕ್ಕುದಾರಿಯನ್ನು ರೇಂಜು ಫಾರೆಸ್ಟು ಆಫಿಸರುಗಳು ಈ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿಯೂ ಆದಾಯಾ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ:—

ಈ ಹರಾಜು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಮಂಜೂರಾತಿಗೆ ವಳಪಟ್ಟಿರುತ್ತೆ. ಹರಾಜು ಆದಾಯಾ ತಾರೀಖಿನ ಮಧ್ಯಾಹ್ನ 12 ಘಂಟೆಗೆ ಸುರು ಮಾಡಲ್ಪಡುವದು.

ನಂಬರು.	ರೇಂಜ್.	ಸ್ಟೇಟ್ ಫಾರೆಸ್ಟುಗಳ ಹೆಸರು	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಶಿವಮೊಗ್ಗ	ಆಲ್ದಹಾರ ಜೋರನ್ಹಡಹಳ್ಳಿ ಕುಂಚಿ ಹಾಂಬೇನಹಳ್ಳಿ ಮುಸಂಬೂರು ಪ್ರಶ್ನಾಳು ಸಕ್ರೆಬೈಲು ಶಂಕರೆ ಪುಂಬಳಿಬೈಲು	ಶಿವಮೊಗ್ಗ ರೇಂಜ್ ಆಫೀಸ್	20—7—1904
2	ಚನ್ನಗಿರಿ	ಕುಕ್ಕವಾಡ ಪುಬ್ಬಾಣಿ	ಚನ್ನಗಿರಿ ರೇಂಜ್ ಆಫೀಸ್	22—7—1904
3	ಶಿಕಾರಿಪುರ	ಬನವನಂದಿಹಳ್ಳಿ ಬಳಂದೂರು ಚಂದ್ರಕಲ ಗಂಗವನಸರ ಕರ್ಡಿಬೆಟ್ಟ ಕವಲಿ ತೊಗರ್ಸಿ	ಶಿಕಾರಿಪುರ ರೇಂಜ್ ಆಫೀಸ್	25—7—1904
4	ಸೊರಬ	ತೆಲಗಡ್ಡಿ ಅರಲೆಗಡ್ಡಿ ಬಟ್ಟದಕಾಲ್ಗಿ ಚಂದ್ರಗುತ್ತಿ ತವಡಿ	ಸೊರಬ ಟ್ಯಾವಲರ್ಸ್ ಬಂಗ್ಲೆಯಲ್ಲಿ	27—7—1904
		ಮಲಂಡೂರು	ಸಾಗರ ರೇಂಜ್ ಆಫೀಸ್	29—7—1904

ಜಿನಸಿಯ ತಪಶೀಲ್.

1. ಹುಣಸೆಹಣ್ಣು	12. ತಾರೇಕಾಯಿ	23. ವಾಟೇಪುಳಿ
2. ಹೊಂಗೇಬೀಜ	13. ಅಳಲಕಾಯಿ	24. ದಾಲಚಿನ್ನಿಮಗ್ಗು
3. ಕಿಗೇಕಾಯಿ	14. ಕಾಡು ಜಗಜೇಬೀಜ	25. ಜೆಂಡೆನಾರು
4. ಗೋಂಡು	15. ಅಂಟವಾಳದಕಾಯಿ	26. ಕಾಡುಯಿಪ್ಪೆ
5. ಜೇನುತುಪ್ಪ	16. ಗುರಿಗೆ ಹರಳು	27. ಖೂಠಗದಪತ್ತಿ
6. ಜೇನುಹ್ಯಾಣ	17. ಕಾಡು ಹರಳು	28. ಕಿರಿ ಈಚಲು
7. ಕಮಿಲಾರಂಗು	18. ಕಾನವೆಣಸು	29. ಜೆಂಡು
8. ಗೇರು	19. ಕಾನಯಾಕ್ಕಿ	30. ಅಗಸೇಬೀಜ
9. ಬ್ಯಾಲದಪಣ್ಣು	20. ನಸರಜೇನು	31. ಜೋಳಾರಬಾರಕು
10. ಕಲ್ಲುಪಾನ್ಯ	21. ಹೂವೆಮ್ಡಿ	32. ಬಳಾಪುಕಲ್ಲು
11. ಮಾಡಿಬೀಜ ಅಥವಾ ಚಾರುಪಪ್ಪು	22. ಹುಳಿಗಲಬೀಜ	33. ರಾಮಪತ್ರೆ—ಕಾನಪತ್ರೆ

2. ಛಡ ದರಖಾಸ್ತುದಾರನು ಹರಾಜು ಖೈದು ಆದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲುಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರಕಾರಕ್ಕೆ ಉಂಟಾಗುವ ನಷ್ಟಕ್ಕೆ ಮೊದಲ ದರಖಾಸ್ತುದಾರನನ್ನು ಗುರಿಮಾಡಲಾಗುತ್ತೆ.

3. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿದ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೆ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲುಹಿಸ್ಸೆ ಹಣವನ್ನ ಸರಕಾತಕ್ಕೆ ದಂಡವಾಗಿ ಸೇರಿಸಿಕೊಳ್ಳುತ್ತಲ್ಲದೆ ಇನ್ನು ಬಾಕಿ ಉಳಿಯುವ ಹಣವನ್ನು ರೆವಿನ್ಯೂ ಕಂದಾಯಿಸಂತೆ ವಸೂಲ್ ಮಾಡಲಾಗುತ್ತೆ.

4. ಹರಾಜು ಮೊಬಲಗಿಗೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ಸು ಕೊಡತಕ್ಕದ್ದು.

5. ರೇಂಜು ಫಾರೆಸ್ಟು ಆಫಿಸರು ಯಾವದೊಂದು ಕಾರಣವನ್ನು ತಿಳಿಸದೆ ದರಖಾಸ್ತು ಮಂಜೂರು ಮಾಡುವದಕ್ಕೆ ಆಗಲಿ ತಿರಸ್ಕರಿಸಲಿಕ್ಕೆ ಆಗಲಿ ಸ್ವತಂತ್ರರಾಗಿರುತ್ತಾರೆ.

6. ದರಖಾಸ್ತುದಾರನು ಇನಾಮುದಾರರಿಗೆ ಗೊತ್ತಾದ ಹಕ್ಕುಗಳಲ್ಲಿ ಹಸ್ತಕ್ಷೇಪಕೂಡದು.

7. ದರಖಾಸ್ತುದಾರನಾಗಲೀ ಅಥವಾ ಅವನ ಆಳುಗಳೇ ಆಗಲಿ ಪಸಾರೆ ಜಿನಸು ಜಮಾವಣೆ ಸಪಡಮೇಲೆ ಯಾವ ಗಿಡಗಳನ್ನಾಗಲಿ ಕಾಯಪಡಿಸಕೂಡದು.

8. ದರಖಾಸ್ತುದಾರನು ತಾನು ಖರೀದಿಗೆ ಪಡದಿರುವ ಜಿನಸು ವಿನಹ ಇತರ ಯಾವ ಜಿನಸಿಯನ್ನು ಜಪ್ತಾಯಿಸಕೂಡದು.

9. ದರಖಾಸ್ತುದಾರನ ಏಜಂಟರುಗಳಾಗಲೀ ಅಥವಾ ಆಳುಗಳಾಗಲಿ ಪಸಾರೆ ಜಿನಸು ಜಮಾವಣೆ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ದರಖಾಸ್ತುದಾರನನ್ನೇ ಗುರಿಪಡಿಸಲಾಗುತ್ತೆ.

10. ದರಖಾಸ್ತುದಾರನು 1904ನೆ ಇಸವಿ ಏಪ್ರೆಲ್ ಅಖೈರೊಳಗಾಗಿ ಎಲ್ಲಾ ಪಸಾರೆ ಜಿನಸಿಯನ್ನು ಸ್ಟೇಟು ಫಾರೆಸ್ಟು ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

11. ಸ್ಟೇಟ್ ಫಾರೆಸ್ಟಿಗೆ ದರಖಾಸ್ತುದಾರನ ಅಶ್ರದ್ಧೆಯಿಂದಾಗಲೀ ಅಥವಾ ಈತನ ಅಶ್ರದ್ಧೆಯಿಂದಾಗಲಿ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯಬಂದಲ್ಲಿ ಈ ಕೃತ್ಯಕ್ಕೆ ದರಖಾಸ್ತುದಾರನನ್ನ ಗುರಿಪಡಿಸಲಾಗುತ್ತೆ.

12. ದರಖಾಸ್ತುದಾರನೆ ಆಗಲಿ ಅಥವಾ ಈತನ ನವುಕರರೆ ಆಗಲಿ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಾನ ತರ ಸ್ಟೇಟು ಫಾರೆಸ್ಟಿನಲ್ಲಿ ಪ್ರವೇಶ ಮಾಡಕೂಡದು.

13. ಈ ಮೇಲ್ಕಂಡ ಪರತ್ತುಗಳಿಗೆ ವ್ಯತಿರಿಕ್ತವಾಗಿ ನಡದಲ್ಲಿ ದರಖಾಸ್ತು ರದ್ದು ಮಾಡುವದಲ್ಲದೆ ಜಮಾಯಿಸಿದ ಎಲ್ಲಾ ಪಸಾರೆ ಜಿನಸಿಯನ್ನು ಸರಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಒಂದುನೂರು ರೂಪಾಯಿಗಳ ವರಿಗೆ ಜುರ್ಮಾನೆ ವಿಧಿಸುವದಕ್ಕು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರು ಸ್ವತಂತ್ರರಾಗಿರುತ್ತಾರೆ.

ಜಿ. ಮಾಂಟ್ಗೊಮೆರಿ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್ ಶಿವಮೊಗ್ಗ.

ತಾರೀಖು 2ನೆ ಜುಲ್ಯೆ 1904ನೆ ಇಸವಿ.

ಇದರಿಂದ ಎಲ್ಲರಿಗೂ ತಿಳಿಯಪಡಿಸುವದೇನಂದರೆ :—ತುಮಕೂರು ಡಿಸ್ಟ್ರಿಕ್ಟು ಎಲ್ಲಾ ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಲ್ಲಿನ ಡಿಸ್ಟ್ರಿಕ್ಟ್ ಜಂಗಲ್ ಮತ್ತು ಸರಕಾರಿ ಆಕಾರ ಕಂಡ ಬೂಜರು ಜಮೀನು ಮತ್ತು ಪ್ಯಾಯಲ್ ರಿಜರ್ವ್ ಮತ್ತು ಅಮೃತಮಹಲ್ ಕಾವಲಿಗಳು ಇವುಗಳಲ್ಲಿನ ಜಂಗಲಿ ಪಸಾರೆಬಾಬು 1904—1905ನೆ ಸಾಲಿಗೆ ಅಂದರೆ 1904ನೆ ಜುಲ್ಯೆ 1ರ ಲಾಗಾಯತು 1905ನೆ ಜೂನ್ ಅಖೈರ್ ವರಿಗೂ ರೂಢಿಸಿಕೊಳ್ಳತಕ್ಕ ಹಕ್ಕುದಾರಿಯು ಈ ಮೊದಲೇ ಫಾಯಿಷ್ಮಾಡಿರುವ ಸ್ಥಳಗಳು ಮತ್ತು ತಾರೀಖುಗಳಲ್ಲಿ 1904ನೆ ಜುಲ್ಯೆ 20ನೆ ತಾರೀಖು ಲಾಗಾಯಿತು ಪ್ರಾರಂಭವಾಗಿ ಆಯಾಯ ತಾಲ್ಲೂಕುಗಳ ಅಮಲ್ದಾರ್ರು ಮತ್ತು ಸಮ್ಬಂಧಪಟ್ಟ ರೇಂಜು ಆಫಿಸರುಗಳು ಕೇರಿ ಇವರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

ಪರತ್ತು ವಗ್ಯೆರ 30 - 6—1904ನೆ ವಸ್ತುಂ ಮೈಸೂರು ಗೆಜೆಟ್ಟಿನ IIನೆ ಭಾಗದ 830ನೆ ಪುಟದಲ್ಲಿ ಫಾಯಿಷಾಗಿರುವ ನೋಟಿಫಿಕೇಷ್ನ ನೋಡತಕ್ಕದ್ದು.

ಬಿ. ಹೀರಾಸಿಂಗ್,
ಫಾರ್ ಡೆಪ್ಯುಟಿ ಕಮಿಷನರ್, ತುಮಕೂರು ಡಿಸ್ಟ್ರಿಕ್ಟು.

124

1094

1904ನೆ ಇಸವಿ ಜುಲೈ ತಾರೀಖು 2ರಲ್ಲು.

ಫಾರೆಸ್ಟ್ ಸೆಟ್ಲ್‌ಮೆಂಟ್ ಹೊಸತಾಗಿ ಮಾಡಿರುವುದು.

ಅರೀಕೆರೆ ತಾಲ್ಲೂಕು, ಬಾಣಾವರದಲ್ಲಿ ಫಾರೆಸ್ಟು.

ಸ್ ಾ 1901ನೆ ಇಸವಿ 11ನೆ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷ್ನ 5ನೆ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—

ಸ್ ಾ 1904ನೆ ಇಸವಿ ಜೂನ್ ಮಾಹ 2ನೆ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಶೀಲು ಕಂಡ ಜಮೀನ್ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಹೂಡಬೇಕೆಂದು ನಿಶ್ಚೈಸಲ್ಪಟ್ಟಿದೆಯಾದ್ದರಿಂದ, ಈ ಇಸ್ತಿಹಾರಿ ಫಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟ್ ರೆಗ್ಯುಲೇಷ್ನ 17ನೆ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜಮೀನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆಪತ್ ವಾಸ್ತವಿಯಿಂದ ಪಡಿಸಿ ಹಕ್ಕೂ, 1901ನೆ ಇಸವಿ ಜೂನ್ ಮಾಹ 2ನೆ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಬೇರೆ ಖಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದ್ರವ್ಯ, ವಗೈರೆ ಲೇವಾದೇವಿಯಿಂದಾಗಲೀ ಇತರ ಬಾಧ್ಯತೆಯೂ ಸಹ, ಇದರಿಂದ ನಿರ್ಬಂಧಿಸಲ್ಪಡುವುದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರಿಗೆ ಬರಹಮಾಡಿಕೊಂಡು ಅವರಿಂದ ಲಿಖಿತಮೂಲಕವಾಗಿ ಅಪ್ಪಣೆ ಪಡೆದು ನಡೆಸಿಕೊಳ್ಳತಕ್ಕದ್ದು.]

ಸದರೀ ಪ್ರದೇಶದಲ್ಲಿ ಯಾವಕಡೆಯಲ್ಲಾ ಸಾಗುವಳಿಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ ಇತರ ಅಪ್ಪಣೆ ಕಿವಾಯಿ, ಗಿಡ ಕತರಾಪಣೆ ವಗೈರೆ ಮಾಡಬ್ಪಡತಕ್ಕದಲ್ಲ.

ಫಾರೆಸ್ಟ್ ಸೆಟಲ್‌ಮೆಂಟ್ ಆಫೀಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜಾತಿಯವರಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವು.

ಆದುದರಿಂದ ಮೇಲ್ಕಂಡ ಜಮೀನಿನ ಪೈಕಿ ಯಾವದಕ್ಕಾದರೂ ಹಕ್ಕಿದೆಯೆಂದು ವಾದಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಫಾಯಿಷಾದ ತಾರೀಖಿನ ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ಕತ್ ಮಾಡಿರುವ ಫಾರೆಸ್ಟ್ ಸೆಟಲೆಮೆಂಟ್ ಆಫೀಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲಿ, ಹಾನಿಸಿ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತೈವಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷ್ನ 17ನೆ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜಮೀನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ವಾಯಿದೆಯೊಳಗಾಗಿ) ಯಾವ ಹಕ್ಕುಗಳೆ ಬಾಧ್ಯತೆಯು ವಾದಿಸಲ್ಪಡುವುದಿಲ್ಲವೋ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವಿಯೂ, ಅರಕಾರೂ, ಅಂಗೀಕರಿಸಲ್ಪಡುವುದಿಲ್ಲವು.

ಪ್ರದೇಶದ ವಿವರ.

ತಾಲ್ಲೂಕು.	ಹಾಲ್ಲೂಕಿನ ಹೆಸರು.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಅರೀಕೆರೆ	ಬಾಣಾವರ ಹೋಬಳಿ.	ಎಕರೆ. ಗುಂಟೆ. 4983 38	ಬಾಣಾವರ.	ಸ್ಥಳ.—ಹಂಚಿಕಲ್‌ಗುಡ್ಡ ಸ್ಟೇಟ್ ಫಾರೆಸ್ಟಿಗೂ ಮತ್ತು ಬಾಣಾವರ—ಹುಲಿಯೂರ ರಸ್ತೆಗೂ ಹುಡ್ಡೆ ಸದರೀ ಹಿರಿಕಲ್‌ಗುಡ್ಡ ಸ್ಟೇಟ್ ಫಾರೆಸ್ಟನೊಡನೆ ಕೇರುತ್ತೆ. **ಚಕ್ಕುಬಂದಿ.** ಉತ್ತರಕ್ಕೆ.—ಸಂಕರ್ನ ಹಳ್ಳಿಯ ಸರ್ವೆ ನಂ. 8ರ ನೈರುತ್ಯ ಮೂಲೆಯಿಂದ ಹೊರಟು ಲೈನು ಅದೇ ಗ್ರಾಮದ ಸರ್ವೆ ನಂ. 8ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಮತ್ತು ನಂ. 6ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಹೋಗುತ್ತದೆ. ಆಮೇಲೆ ಕಾಲ್ ಸಾದಳಹಳ್ಳಿಯ ದಕ್ಷಿಣ ಎಲ್ಲೆಯ ಉದ್ದಕ್ಕೂ ಹಳ್ಳಿತಿಮ್ಮನಹಳ್ಳಿಯ ಸರ್ವೆ ನಂ. 9ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ಗ್ರಾಮದ ಸರ್ವೆ ನಂ. 10 ವ 11 ಇವುಗಳ ಪಶ್ಚಿಮ ಪಾರ್ಶ್ವಗಳ, ಸರ್ವೆ ನಂ. 11ರ ದಕ್ಷಿಣ ಪಾರ್ಶ್ವದ, ಸರ್ವೆ ನಂ. 11 ವ 10 ಇವುಗಳ ಪೂರ್ವ ಪಾರ್ಶ್ವಗಳ, ಸರ್ವೆ ನಂ. 1 ವ 2 ಇವುಗಳ ಪಶ್ಚಿಮ ಮತ್ತು ದಕ್ಷಿಣ ಪಾರ್ಶ್ವಗಳ, ಸರ್ವೆ ನಂ. 2, 3 ಮತ್ತು 4 ಇವುಗಳ ಪೂರ್ವ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಕಲಗುಂದಿ ಗ್ರಾಮದ ಸರ್ವೆ ನಂ. 65ರ ನೈರುತ್ಯ ಮೂಲೆಗೆ ಹೋಗುತ್ತದೆ.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ.	ಸುವಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಹಾಸನ.	ಅರಸೀಕೆರೆ ತಾಲ್ಲೂಕು, ಬಾಣಾವರ ಹೋಬಳಿ.	ಎಕರೆ. ಗಂಟಿ. 4933 38	ಬಾಕನಕೆರೆ.	ಪೂರ್ವಕ್ಕೆ.—ಆಮೇಲೆ ಕಲಗುಂದಿ ಗ್ರಾಮದ ಸರ್ವೆ ನಂ. 65, 64, 60, ವ 61 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖ್ಯೆರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಕಲಗುಂದಿಯ ಸರ್ವೆ ನಂ. 61ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಗೊಲ್ಲರಹಳ್ಳಿಯ ಸರ್ವೆ ನಂ. 4ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಗ್ರಾಮದ ಸರ್ವೆ ನಂ 3, 2, 46, 45 ವ 43 ಇವುಗಳ ಪಶ್ಚಿಮ ಪಾರ್ಶ್ವಗಳ ಮತ್ತು ನಂ. 43 ಮತ್ತು 42 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ನಂತೀಪುರ ಗ್ರಾಮದ ಸರ್ವೆ ನಂ. 67ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 67, 66, 65, 64 ವ 63 ಇವುಗಳ ಪಶ್ಚಿಮ ಪಾರ್ಶ್ವಗಳ, ಸರ್ವೆ ನಂ. 63 ವ 64 ಇವುಗಳ ದಕ್ಷಿಣ ಪಾರ್ಶ್ವಗಳ ಮತ್ತು ಅದೇ ಗ್ರಾಮದ ಸರ್ವೆ ನಂ. 60, 95, 59, 96, 97 ಮ 58 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ ತರುವಾಯ ಜನ್ನಾವರ ಗ್ರಾಮ ಮತ್ತು ಹಿರಿಕಲ್ಗುಡ್ಡ ಫಾರೆಸ್ಟಿನ ಪಶ್ಚಿಮ ಎಲ್ಲೆಯ ಉದ್ದಕ್ಕೂ ಮೈಲನಹಳ್ಳಿ ಗ್ರಾಮದ ಈಶಾನ್ಯ ಮೂಲೆಯನ್ನು ಸೇರುವ ವರಿಗೂ ಹೋಗುತ್ತದೆ. ದಕ್ಷಿಣಕ್ಕೆ.—ಅಲ್ಲಿಂದ ಮೈಲನಹಳ್ಳಿ ಗ್ರಾಮದ ಉತ್ತರ ಎಲ್ಲೆಯ ಉದ್ದಕ್ಕೂ ಮರುಳಸಿದ್ದನ ಹಳ್ಳಿಯ ಸರ್ವೆ ನಂ. 4ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಅಲ್ಲಿಂದ ಮರುಳಸಿದ್ದನ ಹಳ್ಳಿಯ ಸರ್ವೆ ನಂ. 4 ವ 3 ಇವುಗಳ ದಕ್ಷಿಣ ಪಾರ್ಶ್ವದ, ಸರ್ವೆ ನಂ. 3ರ ಪೂರ್ವ ವ ಉತ್ತರ ಪಾರ್ಶ್ವಗಳ ಮತ್ತು ಸರ್ವೆ ನಂ. 4 ಮ 1 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ, ಅನಂದನಹಳ್ಳಿಯ ಸರ್ವೆ ನಂ. 11ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಮತ್ತು ಚಿಕ್ಕಮ್ಮನಹಳ್ಳಿಯ ಸರ್ವೆ ನಂ. 49ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಮೊರಟಿಗೆರೆ ಗ್ರಾಮದ ಸರ್ವೆ ನಂ. 83 ವ 85 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖ್ಯೆರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 85ರ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 79ರ ಪೂರ್ವ ಪಾರ್ಶ್ವದ, ಸರ್ವೆ ನಂ 78 ವ 77 ಇವುಗಳ ಉತ್ತರ ಪಾರ್ಶ್ವಗಳ ಮತ್ತು ಮೊರಟಿಗೆರೆ ಗ್ರಾಮದ ಸರ್ವೆ ನಂ. 70ರ ಪೂರ್ವಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಬ್ಯಾಡರಹಳ್ಳಿ ಗ್ರಾಮದ ಪೂರ್ವ ಎಲ್ಲೆಯ ಉದ್ದಕ್ಕೂ ನಂ. 17ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 17ರ ಪೂರ್ವಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 16ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 9ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ವಾಲಹಳ್ಳಿ ಗ್ರಾಮದ ಸರ್ವೆ ನಂ. 9 ವ 8 ಇವುಗಳ ದಕ್ಷಿಣ ಪಾರ್ಶ್ವದ, ಸರ್ವೆ ನಂ. 8, 7 ವ 6 ಇವುಗಳ ಪೂರ್ವ ಪಾರ್ಶ್ವದ, ಸರ್ವೆ ನಂ. 5ರ ಪೂರ್ವ ವ ಉತ್ತರ ಪಾರ್ಶ್ವಗಳ, ಸರ್ವೆ ನಂ. 11ರ ಪೂರ್ವ ಪಾರ್ಶ್ವದ, ಸರ್ವೆ ನಂ. 18ರ ದಕ್ಷಿಣ, ಪೂರ್ವ ವ ಉತ್ತರ ಪಾರ್ಶ್ವಗಳ, ಸರ್ವೆ ನಂ. 3ರ ಪೂರ್ವ ವ ಉತ್ತರ ಪಾರ್ಶ್ವಗಳ ಮತ್ತು ಸರ್ವೆ ನಂ. 20 ವ 19 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತದೆ ತರುವಾಯ ಬೈರಾಪುರ ಗ್ರಾಮದ ಪೂರ್ವ ಮತ್ತು ಉತ್ತರ ಎಲ್ಲೆಗಳ ಉದ್ದಕ್ಕೂ ಸಂಕರ್ನಹಳ್ಳಿಯ ಸರ್ವೆ ನಂ. 10ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸಂಕರ್ನಹಳ್ಳಿ ಗ್ರಾಮದ ಸರ್ವೆ ನಂ. 10ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಬಿ. ರಾಮಸ್ವಾಮಯ್ಯರ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫೀಸರವರು, ಹಾಸನ ಡಿಸ್ಟ್ರಿಕ್ಟು.